**ದಿನಾಂಕಃ 05.05.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನಾನು ಎರಡು ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಪೊಲೀಸ್ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇದೆ. ನಾನು ಈಗ ಅಂತಿಮ ವರ್ಷದ ಎಂ.ಬಿ.ಎ ವ್ಯಾಸಂಗ ಮಾಡುತ್ತಿದ್ದೇನೆ. ಅಪಘಾತವಾದಾಗ ನಾನು ಪ್ರಥಮ ಸೆಮಿಸ್ಟರ್ ನಲ್ಲಿ ವ್ಯಾಸಂಗ ಮಾಡುತ್ತಿದ್ದೆನು. ಆಪಾದಿತ ಕಾರನ್ನು ನನ್ನ ಸ್ನೇಹಿತ ಶೌಕ್ ತಂದಿದ್ದು, ಅದರ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ನಾನು ಚಾಲನಾ ಪರವಾನಗಿಯನ್ನು ಹೊಂದಿರುತ್ತೇನೆ. ಚಾಲನಾ ಪರವಾನಗಿಯನ್ನು ಹಾಜರುಪಡಿಸಿಲ್ಲ ಮತ್ತು ಹಾಜರುಪಡಿಸಲು ತೊಂದರೆ ಇಲ್ಲ.

ಕಾರಿನಲ್ಲಿ ಒಟ್ಟು ನಾಲ್ಕು ಜನ ಹೋಗುತ್ತಿದ್ದೆವು. ಕಾರಿನಲ್ಲಿ ನನ್ನೊಂದಿಗೆ ಹರ್ಷ್ ಪಿ. ಬಸೀರ್, ಶೌಕ್ ಮತ್ತು ಸಾಹಿಲ್ ಇದ್ದರು. ಆಪಾದಿತ ಕಾರನ್ನು ಶೌಕ್ ರವರು ಬಾಡಿಗೆಗೆ ಪಡೆದಿರಲಿಲ್ಲ. ಅಪಘಾತದಲ್ಲಿ ಇಬ್ಬರು ಮೃತಪಟ್ಟಿರುತ್ತಾರೆ. ನಾನು ಕಾರಿನ ಹಿಂಭಾಗದ ಆಸನದಲ್ಲಿ ಕುಳಿತಿದ್ದೆನು. ಕಾರಿನಲ್ಲಿ ಹೋಗುತ್ತಿದ್ದ ನಾವೆಲ್ಲರೂ ಶೀಟ್ ಬೆಲ್ಟ್ ಧರಿಸಿರಲಿಲ್ಲ, ಆದರೆ ಚಾಲಕ ಮತ್ತು ಅವನ ಪಕ್ಕದಲ್ಲಿ ಕುಳಿತಿದ್ದವರು ಧರಿಸಿರುತ್ತಾರೆ. ನಾವು ಅರಣ್ಯ ಪ್ರದೇಶಕ್ಕೆ ಟ್ರಿಪ್ ಹೋಗಿದ್ದೆವು. ಅಪಘಾತದ ಬಗ್ಗೆ ದೂರನ್ನು ನೀಡಿದ ಅಭಿಲಾಶ್ ರಾಜನ್ ನನ್ನ ಸ್ನೇಹಿತನ ಅಣ್ಣ. ಇತರರು ಮತ್ತು ನಾನು ಮದ್ಯಸೇವನೆ ಮಾಡಿ ಕಾರಿನಲ್ಲಿ ಹೋಗುತ್ತಿದ್ದ ಬಗ್ಗೆ ದೂರಿನಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. ಅಂತಿಮ ವರದಿಯ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಕಾರಿನ ಚಾಲಕ ಮತ್ತು ಇತರರು ಮದ್ಯಸೇವನೆ ಮಾಡಿದ್ದರು ಎಂದು ಅಂತಿಮ ವರದಿಯಲ್ಲಿ ನಮೂದು ಇದೆ ಎಂದರೆ ಸರಿ. ಕಾರಿನಲ್ಲಿ ಪ್ರಯಾಣಿಸುವಾಗ ಶೀಟ್ ಬೆಲ್ಟ್ ಧರಿಸಬೇಕು ಎಂಬ ನಿಯಮದ ಬಗ್ಗೆ ತಿಳಿದಿದೆ. ಅಪಘಾತದ ಸ್ಥಳದಲ್ಲಿ ತಿರುವು ಇದೆ ಎಂದರೆ ಸರಿ. ಅಪಘಾತ ಮದ್ಯರಾತ್ರಿ ಸಂಭವಿಸಿದ್ದು, ಚಾಲಕ ಮದ್ಯಸೇವನೆ

ಮಾಡಿದ್ದ ಕಾರಣ ವಾಹನದ ನಿಯಂತ್ರಣ ತಪ್ಪಿ ರಸ್ತೆಯ ಬದಿಯಲ್ಲಿರುವ ಮರಕ್ಕೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿ. ಮಧ್ಯಸೇವನೆ ಮಾಡಿದ ವ್ಯಕ್ತಿ ವಾಹನ ಚಾಲನೆ ಮಾಡಬಾರದು ಎಂದು ನನಗೆ ತಿಳಿದಿದೆ.

ಅಪಘಾತವಾದ ನಂತರ ಮೊದಲಿಗೆ ಹುಳಿಮಾವಿನಲ್ಲಿರುವ ಕ್ಯಾಮ್ರಿ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ರಕ್ತವನ್ನು ಮಾದರಿ ಪರೀಕ್ಷೆಗೆ ಪಡೆದ ಬಗ್ಗೆ ನನಗೆ ನೆನಪಿಲ್ಲ. ಸದರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ನಂತರ ಫೋರ್ಟಿಸ್ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿಯೂ ಸಹ ರಕ್ತವನ್ನು ಮಾದರಿ ಪರೀಕ್ಷೆಗೆ ಪಡೆದ ಬಗ್ಗೆ ನನಗೆ ನೆನಪಿಲ್ಲ. ಸದರಿ ಆಸ್ಪತ್ರೆಯಲ್ಲಿ ಒಂದು ದಿನ ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ಆಗಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ಮೆಡಿಕಲ್ ಬಿಲ್ಲುಗಳಿಗೆ ಸಂಬಂಧಿಸಿದಂತೆ ಬಿಡುಗಡೆ ಸಮರಿಯನ್ನು ಹಾಜರುಪಡಿಸಿಲ್ಲ. ಚಿಕಿತ್ಸೆಗೆ ತಗುಲಿದ ವೆಚ್ಚ ಮೆಡಿಕ್ಲೇಮ್ ಪಾಲಿಸಿಯ ಮೂಲಕ ಮರುಪಾವತಿಯಾಗಿದೆ ಎಂದರೆ ಸರಿಯಲ್ಲ. ಆಸ್ಪತ್ರೆಯ ವೆಚ್ಚವನ್ನು ನಗದು ರೂಪದಲ್ಲಿ ಕಂತುಗಳ ರೂಪದಲ್ಲಿ ಪಾವತಿಸಿರುತ್ತೇವೆ. ಆ ಬಗ್ಗೆ ರಶೀದಿಗಳನ್ನು ಹಾಜರುಪಡಿಸಿಲ್ಲ. ವೈದ್ಯಕೀಯ ದಾಖಲಾತಿಗಳನ್ನು ನೀಡಿದ ಸಂಬಂಧಪಟ್ಟ ವ್ಯಕ್ತಿಯನ್ನು ವಿಚಾರಣೆಗೆ ಒಳಪಡಿಸಲು ತೊಂದರೆ ಇಲ್ಲ. ಅಪಘಾತದಲ್ಲಿ ನನಗೆ ಸಣ್ಣಪುಟ್ಟ ಗಾಯಗಳು ಆದ ಕಾರಣ ನಾನು ಹೇಳಿರುವಷ್ಟು ಹಣವನ್ನು ಚಿಕಿತ್ಸೆಗೆ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ಉಂಟಾದ ಗಾಯಗಳು ವಾಸಿಯಾವಗಿವೆ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಈಗಲೂ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದ ಖಂಡಿಕೆ 4 ರಲ್ಲಿ ತಿಳಿಸಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

ಶೀಟ್ ಬೆಲ್ಟ್ ಧರಿಸದ ಕಾರಣ ಮತ್ತು ಮಧ್ಯಸೇವನೆ ಮಾಡಿದ ಕಾರಣ ಅಪಘಾತದಲ್ಲಿ ನನ್ನ ಅಜಾಗರೂಕತೆಯೂ ಸಹ ಇದೆ ಎಂದರೆ ಸರಿಯಲ್ಲ. ನನ್ನ ಕೆಲಸ ಮತ್ತು ಆದಾಯಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು

ಹೇಳುವಷ್ಟು ಆದಾಯ ನನಗೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತದ ಪರಿಣಾಮ ನನ್ನ ವ್ಯಾಂಸಗಕ್ಕೆ ಯಾವುದೇ ತೊಂದರೆ ಆಗಿಲ್ಲ ಎಂದರೆ ಸರಿ. ಅಪಾದಿತ ವಾಹನದ ಚಾಲಕ ಮದ್ಯಸೇವನೆ ಮಾಡಿ ವಾಹನ ಚಾಲನೆ ಮಾಡಿದ್ದು, ಪಾಲಿಸಿಯ ನಿಯಮ ಉಲ್ಲಂಘನೆ ಆದ ಕಾರಣ 2ನೇ ಎದರುದಾರರು ಪರಿಹಾರ ಪಾವತಿಸಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**